ಶ್ರೀ ಹೆಚ್. ಸಿ. ಲಿಂಗಾರೆಡ್ಡಿ.—ಯಾವ ಹಣವೂ ರ್ಯಾಪ್ಸ್ ಆಗಿಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಇಂಡೋ ನಾರ್ವೇಜಿಯನ್ ಯೋಜನೆಯಿಂಥ ನಂಬಿಂಥಪಟ್ಟ ಜನರಿಗೆ ಸಿಗುವ ಸವಲತ್ತುಗಳಾದರೂ ಏನು ?

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ.—ಇದರಲ್ಲಿ ಅನೇಕ ಬಗೆಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಇದರಲ್ಲಿ ಬಿಲ್ಡಿಂಗು ಯಾರ್ಡಿಗಾಗಿ ಸುಮಾರು ಮೂವತ್ತು ಲಕ್ಷದಷ್ಟು ಖರ್ಚಾಗಿದೆ. ಇದು ಮೊದಲನೇದು. ಇನ್ನೊಂದು ಐಸ್‌ಕೋಲ್ಡ್ ಸ್ಟೋರೇಜ್ ಕಟ್ಟಿಸಲಾಗಿಯುತ್ತಾ ಬಂದಿದೆ. ಈ ಟ್ರೈನಿಂಗ್ ಸೆಂಟರ್‌ನಲ್ಲಿ 50 ಜನಕ್ಕೆ ಟ್ರೈನಿಂಗ್ ಕೊಟ್ಟಿದ್ದೇವೆ. ಬೋಟ್ ಬಿಲ್ಡಿಂಗ್, ಪೀಷಿಗ್ ಹಾರ್ಬರನ್ನು 13 ಲಕ್ಷ ರೂಪಾಯಿನಲ್ಲಿ ಕಟ್ಟಬೇಕೆಂದು ಇದ್ದೇವೆ. ಅದು 1970ನೇ ಇಸವಿಗೆ ಮುಗಿಯುತ್ತದೆ. ವರ್ಕ್‌ಷಾಪ್ ಸೆಂಟರಿಗೆ ಎಕ್ವಿಪ್‌ಮೆಂಟ್ ಏಪರ್ಾಡು ಮಾಡುತ್ತಿದ್ದೇವೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—1967-68ನೇ ಇಸವಿ ಆಡಿಟ್ ರಿಪೋರ್ಟ್ ನೋಡಿದರೆ ಇಂಡೋ ನಾರ್ವೇಜಿಯನ್ ಯೋಜನೆಯ ಕೆಲಸದಲ್ಲಿ ಮೆಷಿನರಿಯು ತನ್ನ ಭಾಗದ ಕೆಲಸ ಏನು ಮಾಡಬೇಕಾಗಿತ್ತೋ ಅದನ್ನು ಮಾಡದೇ ಇರುವುದರಿಂದ ಅವರು ಕೊಟ್ಟಿರುವ ಹಣವನ್ನು ವಿತ್‌ಡ್ರಾ ಮಾಡಲಿಲ್ಲವೇ ?

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ.—1969ರ ಆಡಿಟ್ ರಿಪೋರ್ಟ್ ಈಗ ತಾನೇ ಕೈಸೇರಿದೆ. ಇಂಡಿಯಾ ಸರ್ಕಾರದವರು ಬೇರೆ ದೇಶದ ಇಂಜನಿಯರ್‌ನ್ನು ಕರೆಸಕೂಡದು ಎಂದು ತೀರ್ಮಾನಿಸಿದ್ದಾರೆ. ನಮ್ಮ ದೇಶದ ಇಂಜನೀಯರ್ಸ್‌ಗೆ ಪ್ರೋತ್ಸಾಹಿಸಬೇಕು ಎಂದು ಮಾಡಿದ್ದಾರೆ ಮತ್ತು ಆ ಸ್ಟೇಟುಗಳಲ್ಲಿರುವ ಸ್ಟೋನ್‌ಗಳನ್ನು ಒಡೆಯಬೇಕಾದ್ದರಿಂದ ಇಂಡೋ ನಾರ್ವೇಜಿಯನ್ ಯೋಜನೆ ಥೇಂಜ್ ಮಾಡಬೇಕಾದ ಪ್ರಮೇಯ ಒದಗಿತು. ಇನ್ನೊಂದು ಮುಖ್ಯವಾದ ಕಾರಣ ಇಂಜನೀಯರ್ಸ್ ರಜಾ ತೆಗೆದುಕೊಂಡರು. ಕೆಲಸ ಮಾಡುವುದಕ್ಕೆ ಕಂಟ್ರಾಕ್ಟರ್ಸ್ ಬಾರದೇ ಇದ್ದುದರಿಂದ 3 ಸಾರಿ ಟೆಂಡರ್ ಕರೆಯಬೇಕಾಯಿತು. ಕೆಲವು ಕಡೆ ಕೆಲಸ ಮಾಡದೆ ಕಂಟ್ರಾಕ್ಟರ್ಸ್ ಬಿಟ್ಟು ಹೋದ ಪ್ರಮೇಯ ಒದಗಿತು.

Allegation against the Assistant Registrar of Co-operative Societies in Gadag Taluk

538. Sri K. H. PATIL (Gadag).—

Will the Minister for Development be pleased to state:—

(*a*) whether the Assistant Registrar and his supervisors in Gadag Taluk have permitted some money lenders, traders to start a marketing society;

(*b*) whether the Government is aware that the Assistant Registrar at Gadag is doing illegal, high-handed acts ignoring the provisions of law;

(*c*) whether there are any allegations against him to the effect that he is a corrupt official and if so, the action taken against him?

Sri P. M. NADGOUDA (Minister for Development).—

(*a*) No.

(*b*) No such instance has come to the notices of Government.

(*c*) There were some allegations against the Assistant Registrar, Co-operative Societies, Gadag. The allegations were enquired into by

the Deputy Registrar, Co-operative Societies, Dharwar and were foun to be baseless.

ಶ್ರೀ ಕೆ. ಹೆಚ್. ಪಾಟೀಲ್.—ಮಾರಾಟ ಸಂಘವೊಂದನ್ನು ಪ್ರಾರಂಬಿಸಲು ಅಸಿಸ್ಟೆಂಟ್ ರಿಜಿಸ್ಟ್ರಾರರವರು ಅನುಮತಿ ಕೊಟ್ಟಿಲ್ಲವೇ ? ಒಂದು ಸೊಸೈಟಿ ಆಲ್ಲದೆ. ಆದರೂ ಇನ್ನೊಂದು ಸೊಸೈಟಿಯನ್ನು ರಿಜಿಸ್ಟರ್ ಮಾಡಿದ್ದಾರೆ. ಇದು ಕಾಯಿದೆಗೆ ವಿರುದ್ಧವಾಗಿ ಮಾಡಿಲ್ಲವೇ ? ಇದರ ಬಗ್ಗೆ ಸತ್ಯಸಂಗತಿಗಳನ್ನು ಹೇಳಿದ್ದೀರಾ ?

ಶ್ರೀ ಪಿ. ಎಂ. ನಾಡಗೌಡ.—ಈ ಸಂಗತಿಗಳೆಲ್ಲಾ ಸತ್ಯಕ್ಕೆ ದೂರವಾದುವು.

Sri SIDDAIAH KASHIMATH.—May I know the names of those persons who made allegations against this Assistant Registrar.

Sri P. M. NADGOUDA.—May I give the names ? Is it in the public Interest ?

ಶ್ರೀ ಎಸ್. ಎಸ್. ಅರಕೇರಿ.—ಸ್ವಾಮಿ (ಸಿ) ಗೆ ಉತ್ತರವಾಗಿ ಅಸಿಸ್ಟೆಂಟ್ ರಿಜಿಸ್ಟ್ರಾರ್ ಏನು ಇದ್ದಾರೆ ಅವರು ಕರಪ್ಟ್ ಇದ್ದಾರೆ ಎಂದು ತಿಳಿದುಕೊಂಡು ಅವರ ಮೇಲೆ ವಿಚಾರಣೆ ಮಾಡಲು ಡೆಪ್ಯೂಟಿ ರಿಜಿಸ್ಟಾರ್‌ರವರನ್ನು ನೇಮಿಸಿದಿರಿ. ಹೀಗೆ ಯಾವ ಆಫೀಸರು ಕರಪ್ಟ್ ಇದ್ದಾರೊ ಅವರ ಮೇಲೆ ಎನ್‌ಕ್ವೈರಿ ಮಾಡಲು ಇನ್ನೊಬ್ಬ ಆಫೀಸರನ್ನು ನೇಮಿಸುವ ಬದಲು ನಪರೇಟ್ ಆಗಿ ಒಬ್ಬ ಎನ್‌ಕ್ವೈರಿ ಆಫೀಸರನ್ನು ನೇಮಿಸಿದ್ದರೆ ಅವರ ವಿಚಾರ ಬಯಲು ಹೊರಗೆ ಬರುತ್ತಿತ್ತು ಅಲ್ಲವೆ ?

ಶ್ರೀ ಪಿ. ಎಂ. ನಾಡಗೌಡ.—ಮಾನ್ಯ ಸದಸ್ಯರು ಹೇಳುವ ಮಾತು ಸತ್ಯಕ್ಕೆ ದೂರವಾದುದು. ಆ ಆಪಾದನೆಗಳ ಬಗ್ಗೆ ವಿಚಾರಣೆ ನಡೆಸಿದ್ದಲ್ಲಿ ಏನೂ ಆಧಾರವಿಲ್ಲವೆಂಬುದಾಗಿ ಕಂಡುಬಂದಿದೆ.

ಶ್ರೀ ಕೆ. ಪ್ರಭಾಕರ್.—(ಸಿ)ಗೆ ಉತ್ತರವಾಗಿ ಕೆಲವು ಅಲಗೇಷನ್ಸ್ ಬಂದಿದ್ದು ವಿಚಾರಣೆ ನಡೆಸರಾಗಿ ಅವು ಬೇಸ್‌ಲೆಸ್ ಎಂದು ಗೊತ್ತಾಯಿತು ಎಂದು ಹೇಳಿದ್ದಾರೆ. ಈ ಕೆಲವು ಅಲಗೇಷನ್ಸ್ ಪೈಕಿ (ಬ) ಭಾಗದಲ್ಲಿ ಪ್ರಸ್ತಾಪ ಮಾಡಿರುವುದೂ ಸೇರಿಯೆಯಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ಇಲ್ಲ.

2-00 P.M.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಕೆಳಗಿನ ಅಧಿಕಾರಿಗಳು ಮಾಡಿದ ತಪ್ಪನ್ನು ಮೇಲಿನ ಅಧಿಕಾರಿಗಳು ವಿಚಾರಣೆ ಮಾಡುವ ಸಂದರ್ಭದಲ್ಲಿ ಅವರನ್ನು ಬೆನ್ನು ಹಾಕಿಕೊಳ್ಳುವ ಸ್ವಭಾವ ಜಾಸ್ತಿಯಾಗಿರುವುದರಿಂದ ವಿಚಾರಣೆಯನ್ನು ವಿಜಿಲೆನ್ಸ್ ಕಮಿಷನರ್ ಮುಖಾಂತರ ಮಾಡಿಸುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ವಿಜಿಲೆನ್ಸ್ ಕಮಿಷನರ್‌ಗೆ ಒಪ್ಪಿಸತಕ್ಕ ವಿಷಯಗಳೂ ಇವೆ. ಆಗ ವಿಜಿಲೆನ್ಸ್ ಕಮಿಷನರನ್ನು ಕೇಳುತ್ತೇವೆ. ಪಾರ್ಟಿ ಪಂಗಡಗಳು, ದ್ವೇಷಗಳು, ಇದರಿಂದ ಕೂಡಿದ ಅಪಾದನೆಗಳು ಬಂದಾಗ ಇಂಥವನ್ನೆಲ್ಲ ವಿಜಿಲೆನ್ಸ್ ಕಮಿಷನ್ನಿಗೆ ಹಾಕುತ್ತಹೋದರೆ ಅಧಿಕಾರಿಗಳಲ್ಲ ಡೀಮಾರಲೈಜೇಷನ್ ಎಫೆಕ್ಟ್ ಆಗುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ಸಹಕಾರ ಇಲಾಖೆಯಲ್ಲಿ ಸೆಲ್ ಆಡಿಟ್ ಇದೆ. ಆದರಲ್ಲಿ ದುಡ್ಡು ತಿಂದಿದ್ದಾರೆ ಎಂದು ಗೊತ್ತಾಗಿದೆ ಎಂದು ಕಾಗದ ಬರೆದರೂ ಅಂಥವರ ವಿಚಾರದಲ್ಲಿ ದುಡ್ಡು ತಿಂದಿದ್ದಾರೆ, ಕರಪ್ಟ್ ಇದ್ದಾರೆ ಎಂದು ಯಾರ ಮೇಲಾದರೂ ಕ್ರಮವನ್ನು ತೆಗೆದುಕೊಂಡಿದ್ದೀರಾ ?

ಶ್ರೀ ಪಿ. ಎಂ. ನಾಡಗೌಡ.—ಇದು ದುರ್ದೈವದ ಮಾತು. ಮಾನ್ಯ ಸಿದ್ದವೀರಪ್ಪನವರು ಈ ಸರ್ಕಾರ ಬಂದ ಮೇಲೆ ಯಾವುದೇ ಒಬ್ಬ ಅಧಿಕಾರಿ ದುಡ್ಡು ತಿಂದ ಎಂದು ಬರೆದಿಲ್ಲ. ಈ ವಿಚಾರದಲ್ಲಿ ಬೇಕಾದರೆ ಅಂಕಿ ಅಂಶಗಳನ್ನು ಕೊಡುತ್ತೇನೆ.